(ಇಂದು ದಿನಾಂಕಃ **04-09-2023** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಶ್ರೀ ಜೆ ಎನ್ ಜೆ ವಕೀಲರಿಂದ:**

ಪ್ರತಿವಾದಿ 2 ಮತ್ತು 4 ರವರು ನ್ಯಾಯಾಲಯಕ್ಕೆ ಬಂದಿಲ್ಲ. ಅವರ ಪರವಾಗಿ ಸಾಕ್ಷಿ ನುಡಿಯಲು ಲಿಖಿತವಾಗಿ ನೋಟಿಸ ನೀಡಿರುಲ್ಲ.

2. ನನಗೆ ಓದು ಬರಹ ಬರುವುದಿಲ್ಲ. ದಾವೆ ಏತಕ್ಕೆ ಹಾಕಿದ್ದಾರೆ ಗೊತ್ತಿಲ್ಲ. ವಾದಿಯರು ಹೆಣ್ಣಾಸ್ತಿಯಲ್ಲಿ ಭಾಗ ಕೇಳಿದ್ದಾರೆ. ದಾವಾ ಸ್ವತ್ತುಗಳು ನನ್ನ ತಂದೆ ಮತ್ತು ಅವರ ತಂದೆಗೆ ಸಂಬಂಧಪಟ್ಟ ಸ್ವತ್ತುಗಳೆಂದರೆ ಸರಿಯಲ್ಲ. ನಮ್ಮ ತಂದೆಯ ಹೆಸರಿನಲ್ಲಿ ಯಾವುದೇ ಮನೆಗಳು ಇಲ್ಲ. ಶಿರೂರಿನಲ್ಲಿರುವ ಮನೆ ನನ್ನ ತಾಯಿಯ ತಂದೆಗೆ ಸಂಬಂಧಪಟ್ಟಿದೆ ಎಂದರೆ ಸರಿ. ನನ್ನ ತಾಯಿಯ ತಂದೆಯ ಗೌಡಪ್ಪ ಗೌಡ ಎಂದರೆ ಸರಿ. ಅವರು 40 ರಿಂದ 45 ವರ್ಷಗಳ ಹಿಂದೆ ತೀರಿ ಹೋಗಿರುತ್ತಾರೆ ಎಂದರೆ ಇರಬಹುದು. ಗೌಡಪ್ಪಗೌಡರ ಹೆಂಡತಿಯವರ ಹೆಸರು ಫಕ್ಕೀರವ್ವ. ಆಕೆ ತೀರಿ ಹೋಗಿ 15 ರಿಂದ 20 ವರ್ಷವಾಗಿರಬಹುದು. ಫಕ್ಕೀರವ್ವ ತೀರಿ ಹೋಗಿ 8-10 ವರ್ಷವಾಗಿದೆ ಎಂದರೆ ಸುಳ್ಳು. ಫಕ್ಕೀರವ್ವಳಿಗೆ ಬಸವ್ವ, ಚೆನ್ನವ್ವ, ಯಲ್ಲವ್ವ ಮಕ್ಕಳು ಎಂದರೆ ಸರಿ. ಚೆನ್ನವ್ವ ಎಂದರೆ ನನ್ನ ತಾಯಿ. ವಾದಿ 2 ನೇಯವರನ್ನು ಶಾಂತವ್ವ ಎಂದು ಕರೆಯುತ್ತಾರೆ ಎಂದರೆ ಸರಿ. ಯಲ್ಲವ್ವ ಕಬ್ಬೆನೂರಿನಲ್ಲಿರುತ್ತಿದ್ದರು ಎಂದರೆ ಸರಿ. ಬಸವ್ವ ಧಾರವಾಡದಲ್ಲಿರುತ್ತಿದ್ದರು ಎಂದರೆ ಸರಿ. ಚೆನ್ನವ್ವ ಶಿರೂರಿನಲ್ಲಿ ಇರುತ್ತಿದ್ದರು ಮತ್ತು ಫಕ್ಕೀರವ್ವ ಅವರೊಂದಿಗೆ ಇರುತ್ತಿದ್ದರು ಎಂದರೆ ಸರಿ. ಗೌಡಪ್ಪಗೌಡ ತೀರಿ ಹೋದ ಮೇಲೆ ಆತನ ಹೆಂಡತಿ ಮಕ್ಕಳಿಗೆ ಆಸ್ತಿಗಳು ಬಂದವು ಎಂದರೆ ಸರಿ. ಫಕ್ಕೀರವ್ವ ನಮ್ಮ ಮನೆಯಲ್ಲಿರುತ್ತಿದ್ದರು ಎಂದರೆ ಸರಿ. ಆಕೆ ನಾವು ಹೇಳಿದಂತೆ ಕೇಳುತ್ತಿದ್ದಳು ಎಂದರೆ ಸರಿ. ಗೌಡಪ್ಪಗೌಡ ತೀರಿ ಹೋದ ಮೇಲೆ ಫಕ್ಕೀರವ್ವನ ಹೆಸರಿನಲ್ಲಿ ಸ್ವತ್ತುಗಳು ಇದ್ದವು ಎಂದರೆ ಸರಿ. ನಾನು ಕಾಗದ ಪತ್ರ ನೋಡಿದ್ದೇನೆ. ಫಕ್ಕೀರವ್ವ ಒಬ್ಬಳ ಹೆಸರಿನಲ್ಲಿ ಸ್ವತ್ತುಗಳು ರೆವಿನ್ಯೂ ದಾಖಲೆಗಳಾದವು ಎಂದರೆ ಸರಿ. ಫಕ್ಕೀರವ್ವ ತಾನು ಸಾಯುವ ಪೂರ್ವದಲ್ಲಿ ಮೃತ್ಯು ಪತ್ರವನ್ನು ಪ್ರತಿವಾದಿ 4 ರಿಂದ 6 ನೇಯವರ ಹೆಸರಿನಲ್ಲಿ ಮಾಡಿ ಕೊಟ್ಟಿರುತ್ತಾರೆ. ಮೃತ್ಯು ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಫಕ್ಕೀರವ್ವ ತೀರಿ ಹೋದ ಮೇಲೆ ಪ್ರತಿವಾದಿ 2 ರಿಂದ ನೇಯವರ ಹೆಸರುಗಳನ್ನು ದಾವಾ ಸ್ವತ್ತುಗಳಲ್ಲಿ ದಾಖಲಿಸಿಕೊಂಡಿದ್ದೇವೆ ಎಂದರೆ ಸರಿ. ನಮ್ಮ ಹೆಸರನ್ನು ದಾಖಲಿಸುವ ಪೂರ್ವದಲ್ಲಿ ವಾದಿಯರಿಂದ ಯಾವುದೇ ಕಬೂಲಿಯನ್ನು ಪಡೆದುಕೊಂಡಿರುವುದಿಲ್ಲ. ನನ್ನ ಹೆಸರಿನಲ್ಲಿ ಇದ್ದುದ್ದನ್ನು 01.01.2021 ರಲ್ಲಿ ನನ್ನ ಮಗನಿಗೆ

ದಾನ ಪತ್ರ ಮಾಡಿಕೊಟ್ಟಿರುತ್ತೇನೆ. ನನ್ನ ಹೆಸರಿನಲ್ಲಿ ಇದ್ದಿದ್ದನ್ನು ನಾನು ದಾನ ಪತ್ರ ಮಾಡಿಕೊಟ್ಟಿರುತ್ತೇನೆ. ಆ ಜಮೀನು ದಾನ ಮಾಡಲು ನನಗೆ ಯಾವುದೇ ಮಾಲೀಕತ್ವ ಇದ್ದಿದಿಲ್ಲ ಎಂದರೆ ಸರಿಯಲ್ಲ. ದಾನ ಪತ್ರ ಮಾಡುವ ಅಧಿಕಾರ ನನಗೆ ಇರಲಿಲ್ಲ ಮತ್ತು ಅದು ಕೊಟ್ಟಿ ಕಾಗದ ಎಂದರೆ ಸರಿಯಲ್ಲ. ನನ್ನ ತಾಯಿಗೆ ಅವರ ತಂದೆ ಆಸ್ತಿನಲ್ಲಿ ಪಾಲು ಇತ್ತು ಎಂದರೆ ಸರಿ. ನನ್ನ ತಾಯಿ ಮತ್ತು ನಾವು ಅಣ್ಣ ತಮ್ಮಂದಿರು ಸೇರಿ ಇಷ್ಟ ಬಂದಂತೆ ದಾಖಲೆಗಳನ್ನು ತಯಾರಿಸಿಕೊಂಡಿರುತ್ತೇವೆ ಎಂದರೆ ಸುಳ್ಳು. ವಾದಿಯವರು ತವರು ಮನೆಗೆ ಬಂದು ಹೋಗುವುದು ಮಾಡುತ್ತಿದ್ದರು ಎಂದರೆ ಸರಿ. ಫಕ್ಕೀರವ್ವ ನಾನು ಸತ್ತ ನಂತರ ಸ್ವತ್ತುಗಳು ಹೆಂಚಿಕೊಳ್ಳಿ ಎಂದು ಹೇಳುತ್ತಿದ್ದರು ಎಂದರೆ ಸರಿ. ನನಗೆ ನ್ಯಾಯಾಲಯದಿಂದ ಸಮನ್ಸ ಬಂದ ಮೇಲೆ ವಿಭಾಗ ಕೋರಿ ದಾವೆ ಹಾಕಿರುವುದು ಗೊತ್ತಾಯಿತು. ವಾದಿಯವರಿಗೂ ದಾವಾ ಸ್ವತ್ತಿನಲ್ಲಿ ಸಮ ಪಾಲು ಇದೇ ಎಂದರೆ ಸರಿ ಆದೆರ ನಮ್ಮ ಪಾಲಿಗೆ ಮಾಡಿರುತ್ತಾರೆ ಎನ್ನುತ್ತಾರೆ. ವಾದಿಯರಿಗೆ ಸಮ ಪಾಲು ಕೊಡಬೇಕಾಗುತ್ತದೆ ಎಂದು ಸುಳ್ಳು ಪ್ರತಿವಾದ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ. ಇದೆ .

Sd/-

ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ
ನವಲಗುಂದ.